# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ<br>Part – IVA | ಬೆಂಗಳೂರು, ಬುಧವಾರ, ೧೩ ಆಗಸ್ಟ್, ೨೦೨೫ (ಶ್ರಾವಣ ೨೨, ಶಕವರ್ಷ ೧೯೪೭)<br>BENGALURU, WEDNESDAY, 13 AUGUST, 2025 (SHRAVANA 22, SHAKAVARSHA 1947) | ನಂ. ೪೭೯<br>No. 479 |
|---|---|---|


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಏಳನೇ ಅಧಿವೇಶನ**

## ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–52)**

ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ ಸಂ. 38)ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ ಸಂ. 38)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು 2025ರ ಮೇ, 23ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪ್ರಕರಣ 3ರ ತಿದ್ದುಪಡಿ.-** ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ ಸಂ. 38)ರ 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿರುವ (ಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"

| | | |
|---|---|---|
| (ಸಿ-i) | ಪ್ರಾಧಿಕಾರದ ಅಧಿಕಾರವ್ಯಾಪ್ತಿಯೊಳಗೆ ಬರುವ ಪ್ರಾದೇಶಿಕ ಮತಕ್ಷೇತ್ರದ ಸಂಸತ್ ಸದಸ್ಯರು | ಪದನಿಮಿತ್ತ ಸದಸ್ಯರು |
| (ಸಿ-ii) | ಪ್ರಾಧಿಕಾರದ ಅಧಿಕಾರವ್ಯಾಪ್ತಿಯೊಳಗೆ ಬರುವ ಪ್ರಾದೇಶಿಕ ಮತಕ್ಷೇತ್ರದ ಕರ್ನಾಟಕ ರಾಜ್ಯ ವಿಧಾನ ಪರಿಷತ್ ಸದಸ್ಯರುಗಳ ಪೈಕಿ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವರು ನಾಮನಿರ್ದೇಶಿಸಿದ ಒಬ್ಬ ಸದ್ಯಸ್ಯರು | ಪದನಿಮಿತ್ತ ಸದಸ್ಯರು |
| (ಸಿ-iii) | ಅಧ್ಯಕ್ಷರು, ನಗರ ಸಭೆ, ಗದಗ -ಬೆಟಗೇರಿ | ಪದನಿಮಿತ್ತ ಸದಸ್ಯರು |
| (ಸಿ-iv) | ವಿರೋಧ ಪಕ್ಷದ ನಾಯಕರು, ನಗರ ಸಭೆ, ಗದಗ -ಬೆಟಗೇರಿ | ಪದನಿಮಿತ್ತ ಸದಸ್ಯರು |
| (ಸಿ-v) | ಉಪಾಧ್ಯಕ್ಷರು, ನಗರ ಸಭೆ, ಗದಗ-ಬೆಟಗೇರಿ | ಪದನಿಮಿತ್ತ ಸದಸ್ಯರು |
| (ಸಿ-vi) | ಗದಗ- ಬೆಟಗೇರಿ ನಗರ ಸಭೆಯ ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರು, | ಪದನಿಮಿತ್ತ ಸದಸ್ಯರು |

"

**3. ನಿರಸನ ಮತ್ತು ಉಳಿಸುವಿಕೆಗಳು.-** (1) ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಾದೇಶ, 2025 (2025ರ ಕರ್ನಾಟಕ ಅಧ್ಯಾದೇಶ ಸಂ. 03)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ತೆಗೆದುಕೊಂಡ ಯಾವುದೇ ಕ್ರಮವನ್ನು, ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಅದನ್ನು ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 18 ಟಿಎಂಡಿ 2023, ದಿನಾಂಕ:03-05-2025ನ್ನು ಸಚಿವ ಸಂಪುಟದ ಅನುಮೋದನೆಯೊಂದಿಗೆ ಈ ಮುಂದಿನವುಗಳಿಗಾಗಿ ಹೊರಡಿಸಲಾಗಿದೆ,-

(i) ಗದಗ-ಬೆಟಗೇರಿ, ನಗರ ಸಭೆ ಮಿತಿಯೊಳಗಿನ ಸರ್ವೆ ನಂ.3782, 3783, 3786, 3796 ಮತ್ತು 3797ರಲ್ಲಿನ ಸಾರ್ವಜನಿಕ ರಸ್ತೆಯನ್ನೊಳಗೊಂಡು ಹಳೆ ಹತ್ತಿ ಮಾರುಕಟ್ಟೆಯ, 34.32 ಎಕರೆ ಅಳತೆಯ ಭೂಮಿಯನ್ನು ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964ರ 81(3)ನೇ ಪ್ರಕರಣದಡಿ ದಿನಾಂಕ:15-11-2025ರಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯದಂತೆ ನಿರ್ಣಯ ಸಂಖ್ಯೆ:ಸಿ-524/2023ರಲ್ಲಿ ಸರ್ಕಾರಕ್ಕೆ ವರ್ಗಾಯಿಸಲು;

(ii) ಹಾಗೆ ವರ್ಗಾಯಿಸಲಾದ ಭೂಮಿಯನ್ನು ಪ್ರಾಧಿಕಾರವು ರಚನೆಯಾಗಿರುವವರೆಗೆ ಗದಗ ಜಿಲ್ಲೆಯ ಜಿಲ್ಲಾಧಿಕಾರಿಯವರ ಅಭಿರಕ್ಷೆಯಲ್ಲಿ ಇರಿಸಲು; ಮತ್ತು

(iii) "ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ" ರಚನೆಯಾದ ತರುವಾಯ ಸದರಿ ಭೂಮಿಯನ್ನು ವರ್ಗಾಯಿಸಲು,

ವಿಷಯವು ತುರ್ತು ಸ್ವರೂಪದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಗದಗ-ಬೆಟಗೇರಿ ಅಧ್ಯಾದೇಶ, 2025 (2025ರ ಕರ್ನಾಟಕ ಅಧ್ಯಾದೇಶ ಸಂ. 03) ನ್ನು ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

**ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆಗಳ 80ನೇ ನಿಯಮದ (1)ನೇ ಉಪನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ.**

ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 18 ಟಿಎಂಡಿ 2023, ದಿನಾಂಕ:03-05-2025ನ್ನು ಸಚಿವ ಸಂಪುಟದ ಅನುಮೋದನೆಯೊಂದಿಗೆ ಈ ಮುಂದಿನವುಗಳಿಗಾಗಿ ಹೊರಡಿಸಲಾಗಿದೆ,-

(i) ಗದಗ-ಬೆಟಗೇರಿ, ನಗರ ಸಭೆ ಮಿತಿಯೊಳಗಿನ ಸರ್ವೆ ನಂ.3782, 3783, 3786, 3796 ಮತ್ತು 3797ರಲ್ಲಿನ ಸಾರ್ವಜನಿಕ ರಸ್ತೆಯನ್ನೊಳಗೊಂಡು ಹಳೆ ಹತ್ತಿ ಮಾರುಕಟ್ಟೆಯ, 34.32 ಎಕರೆ ಅಳತೆಯ ಭೂಮಿಯನ್ನು ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964ರ 81(3)ನೇ ಪ್ರಕರಣದಡಿ ದಿನಾಂಕ:15-11-2025ರಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯದಂತೆ ನಿರ್ಣಯ ಸಂಖ್ಯೆ:ಸಿ-524/2023ರಲ್ಲಿ ಸರ್ಕಾರಕ್ಕೆ ವರ್ಗಾಯಿಸಲು;

(ii) ಹಾಗೆ ವರ್ಗಾಯಿಸಲಾದ ಭೂಮಿಯನ್ನು ಪ್ರಾಧಿಕಾರವು ರಚನೆಯಾಗಿರುವವರೆಗೆ ಗದಗ ಜಿಲ್ಲೆಯ ಜಿಲ್ಲಾಧಿಕಾರಿಯವರ ಅಭಿರಕ್ಷೆಯಲ್ಲಿ ಇರಿಸಲು; ಮತ್ತು

(iii) "ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ" ರಚನೆಯಾದ ತರುವಾಯ ಸದರಿ ಭೂಮಿಯನ್ನು ವರ್ಗಾಯಿಸಲು,

ವಿಷಯವು ತುರ್ತು ಸ್ವರೂಪದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಗದಗ-ಬೆಟಗೇರಿ ಅಧ್ಯಾದೇಶ, 2025 (2025ರ ಕರ್ನಾಟಕ ಅಧ್ಯಾದೇಶ ಸಂ. 03) ನ್ನು ಪ್ರಖ್ಯಾಪಿಸಲಾಗಿತ್ತು.

**ರಹೀಂ ಖಾನ್**
ಪೌರಾಡಳಿತ ಮತ್ತು ಹಜ್ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ
## ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ ವಿಧೇಯಕ, 2024 (2025ರ ಕರ್ನಾಟಕ ಅಧಿನಿಯಮ 38)ರ ಉದ್ಧೃತ ಭಾಗ

**XXX XXX XXX**

**3. ಪ್ರಾಧಿಕಾರದ ರಚನೆ.-** (1) ಈ ಅಧಿನಿಯಮದ ಉದ್ದೇಶಗಳಿಗಾಗಿ ಅಧಿಸೂಚನೆ ಮೂಲಕ ಗೊತ್ತುಪಡಿಸಿದ ದಿನಾಂಕದ ತರುವಾಯ ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರವೆಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ಪ್ರಾಧಿಕಾರವು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಹಾಗೂ ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಗದಗ ಜಿಲ್ಲೆಯ ಉಸ್ತುವಾರಿ ಮಂತ್ರಿ | ಅಧ್ಯಕ್ಷರು |
| (ಬಿ) | ಪೌರಾಡಳಿತ ಇಲಾಖೆಯ ಪ್ರಭಾರದಲ್ಲಿರುವ ಮಂತ್ರಿ | ಉಪಾಧ್ಯಕ್ಷರು |
| (ಸಿ) | ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ಬರುವ ಮತಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನ ಸಭೆ ಸದಸ್ಯರು | ಪದನಿಮಿತ್ತ ಸದಸ್ಯರು |
| (ಡಿ) | ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ | ಪದನಿಮಿತ್ತ ಸದಸ್ಯರು |
| (ಇ) | ಜಿಲ್ಲಾಧಿಕಾರಿ, ಗದಗ ಜಿಲ್ಲೆ | ಮುಖ್ಯ ಕಾರ್ಯನಿರ್ವಹಣಾಧಿಕಾ ರಿ |
| (ಎಫ್) | ಮುಖ್ಯ ಕಾರ್ಯನಿರ್ವಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಗದಗ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಜಿ) | ಪೊಲೀಸ್ ಅಧೀಕ್ಷಕರು, ಗದಗ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಎಚ್) | ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗ ಜಿಲ್ಲೆ. | ಸದಸ್ಯ ಕಾರ್ಯದರ್ಶಿ |
| (ಐ) | ಕಾರ್ಯಪಾಲಕ ಅಭಿಯಂತರ, ಲೋಕೋಪಯೋಗಿ ಇಲಾಖೆ, ಗದಗ ಜಿಲ್ಲೆ. | ಪದನಿಮಿತ್ತ ಸದಸ್ಯರು |
| (ಜೆ) | ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಗದಗ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಕೆ) | ಆಯುಕ್ತರು, ಗದಗ-ಬೆಟಗೇರಿ ನಗರ ಸಭೆ, ಗದಗ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಎಲ್) | ಉಪ ನಿರ್ದೇಶಕ (ಆಡಳಿತ), ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಗದಗ ಜಿಲ್ಲೆ. | ಪದನಿಮಿತ್ತ ಸದಸ್ಯರು |

| | | |
|---|---|---|
| (ಎಂ) | ಸಹಾಯಕ ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗದಗ ಜಿಲ್ಲೆ. | ಪದನಿಮಿತ್ತ ಸದಸ್ಯರು |
| (ಎನ್) | ಸಹಾಯಕ ನಿರ್ದೇಶಕ, ಪ್ರವಾಸೋದ್ಯಮ ಇಲಾಖೆ, ಗದಗ ಜಿಲ್ಲೆ. | ಪದನಿಮಿತ್ತ ಸದಸ್ಯರು |
| (ಓ) | ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತು ಪ್ರದರ್ಶನ ಪ್ರಾಧಿಕಾರವು ನಾಮನಿರ್ದೇಶಿಸಿದ ಮೂವರು ಸರ್ಕಾರೇತರ ಸದಸ್ಯರು | ಸದಸ್ಯರು |
| (ಪಿ) | ನಗರ ಇಂಜಿನಿಯರಿಂಗ್, ಯೋಜನೆ ಮತ್ತು ವಾಸ್ತುಶಿಲ್ಪ ಕ್ಷೇತ್ರದಲ್ಲಿನ ಐವರು ತಜ್ಞರು | ಆಹ್ವಾನಿತ ಸದಸ್ಯರು |

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**SEVENTH SESSION**

# THE GADAG-BETAGERI BUSINESS, CULTURE AND EXHIBITION AUTHORITY (AMENDMENT) BILL, 2025

## (LA Bill No. 52 of 2025)

A Bill to amend the Gadag-Betageri Business, Culture and Exhibition Authority Act, 2024 (Karnataka Act No. 38 of 2025).

Whereas it is expedient to amend the Gadag-Betageri Business, Culture and Exhibition Authority Act, 2024 (Karnataka Act No. 38 of 2025) for the purposes hereinafter appearing;

Be it enacted by the Karnataka State Legislature in the seventy sixth year of the Republic of India as follows:-

**1. Short title and commencement.-** (1) This Act may be called the Gadag-Betageri Business, Culture and Exhibition Authority (Amendment) Act, 2025.

(2) It shall be deemed to have come into force with effect from 23rdday of May, 2025.

**2. Amendment of section 3.-** In the Gadag-Betageri Business, Culture and Exhibition Authority Act, 2024 (Karnataka Act No. 38 of 2025), in section 3, in sub-section (3), after clause (c), the following shall be inserted, namely:-

“

| | | |
|---|---|---|
| (c-i) | The Member of Parliament whose territorial constituency lies within the jurisdiction of the Authority | Ex-officio Member |
| (c-ii) | Among the Members of the Karnataka State Legislative Council whose territorial constituency lies within the jurisdiction of the Authority, one Member nominated by the Chairman of Karnataka Legislative Council. | Ex-officio Member |
| (c-iii) | The President, City Municipal Council, Gadag - Betageri | Ex-officio Member |
| (c-iv) | The Leader of the opposition party, City Municipal Council, Gadag - Betageri | Ex-officio Member |
| (c-v) | The Vice-President, City Municipal Council, Gadag - Betageri | Ex-officio Member |
| (c-vi) | All Chairpersons of the Standing Committees of the City Municipal Council Gadag - Betageri | Ex-officio Member |

”

**3. Repeal and savings**.- (1) The Gadag-Betageri Business, Culture and Exhibition Authority(Amendment) Ordinance, 2025 (Karnataka Ordinance No. 03 of 2025) is hereby repealed.

(2) Notwithstanding such repeal anything done or any action taken under the Principal Act, as amended by the said Ordinance, shall be deemed to have been done or taken under the Principal Act, as amended by this Act.

## STATEMENT OF OBJECTS AND REASONS

With the approval of the Cabinet the Government Order No. UDD 18 TMD 2023, dated:03.05.2025 has been issued to,-

(i) transfer the land measuring 34.32 acres in the old cotton market along with public roads in Survey No. 3782, 3783, 3786, 3796 and 3797 within the limits of Gadag-Betageri City Municipal Council to the Government under section 81(3) of the Karnataka Municipalities Act, 1964 as resolved in the Cabinet meeting held on 15.11.2023, vide Resolution No. C-524/2023.

(ii) place the land so transferred in the custody of the Deputy Commissioner, Gadag District till the formation of the Authority.

(iii) transfer the said land to the "Gadag-Betageri Trade, Culture and Exhibition Authority" after its formation.

As the matter was urgent and both Houses of the State Legislature were not in session and as directed by the Hon'ble Governor, the Gadag-Betageri Business, Culture and Exhibition Authority (Amendment) Ordinance, 2025 (Karnataka Ordinance No. 03 of 2025) was promulgated.

This Bill seeks to replace the above ordinance.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**EXPLANATORY STATEMENT AS REQUIRED BY SUB-RULE (1) OF RULE 80 OF THE RULES OF PROCEDURE AND CONDUCT OF BUSINESS IN THE KARNATAKA LEGISLATIVE ASSEMBLY.**

With the approval of the Cabinet the Government Order No. UDD 18 TMD 2023, dated:03.05.2025 has been issued to,-

(i) transfer the land measuring 34.32 acres in the old cotton market along with public roads in Survey No. 3782, 3783, 3786, 3796 and 3797 within the limits of Gadag-Betageri City Municipal Council to the Government under section 81(3) of the Karnataka Municipalities Act, 1964 as resolved in the Cabinet meeting held on 15.11.2023, vide Resolution No. C-524/2023.

(ii) place the land so transferred in the custody of the Deputy Commissioner, Gadag District till the formation of the Authority.

(iii) transfer the said land to the "Gadag-Betageri Trade, Culture and Exhibition Authority" after its formation.

As the matter was urgent and both Houses of the State Legislature were not in session and as directed by the Hon'ble Governor, the Gadag-Betageri Business, Culture and Exhibition Authority (Amendment) Ordinance, 2025 (Karnataka Ordinance No. 03 of 2025) was promulgated.

**RAHIM KHAN**
Minister for Municipal Administration and Hajj

**M.K. VISHALAKSHI**
Secretary
Karnataka Legislative Assembly

## ANNEXURE

## EXTRACT FROM THE GADAG-BETAGERI BUSINESS, CULTURE AND EXHIBITION AUTHORITYACT, 2024 (KARNATAKA ACT NO. 38 OF 2025)

**X X XX XX**

**3. Constitution of the Authority.-** (1) As soon as may be after the appointed day there shall be established for the purposes of this Act, an Authority to be called the Gadag-Betageri Business, Culture and Exhibition Authority by a notification.

(2) The Authority shall be a body corporate by the name aforesaid having perpetual succession and common seal with power subject to the provisions of this Act, to acquire hold and dispose of property both movable and immovable and to contract and shall by the said name sue or be sued.

(3) The Authority shall consist of the following members, namely:-

| | | |
|---|---|---|
| (a) | The Minister In-charge of Gadag District. | Chairperson |
| (b) | The Minister In-charge of Department of Municipal Administration. | Vice-Chairperson |
| (c) | The member of the Legislative Assembly whose territorial constituency lies within the jurisdiction of the Authority. | Ex-Officio Member |
| (d) | Principal Secretary / Secretary to Government Urban Development department | Ex-Officio Member |
| (e) | The Deputy Commissioner, Gadag District | Chief Executive Officer |
| (f) | The Chief Executive Officer, Zilla Panchayat, Gadag District | Ex-officio Member |
| (g) | The Superintendent of Police, Gadag District | Ex-officio Member |
| (h) | Project Director, District Urban Development Cell, Gadag District | Member Secretary |
| (i) | Executive Engineer of Public Works Department, Gadag District | Ex-officio Member |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | |
|---|---|---|
| (j) | Commissioner, Urban Development Authority, Gadag District | Ex-officio Member |
| (k) | Commissioner of City Municipal Council, Gadag-Betageri, Gadag District | Ex-officio Member |
| (l) | Deputy Director (Administration), Department of School Education and Literacy, Gadag District | Ex-officio Member |
| (m) | Assistant Director, Kannada and Culture Department, Gadag District | Ex-officio Member |
| (n) | Assistant Director, Tourism Department, Gadag District | Ex-officio Member |
| (o) | Three Non-official members nominated by Authority Gadag-Betageri, Business, Culture and Exhibition Authority | Members |
| (p) | Five Experts in the field of Urban Engineering/Planning/Architecture | Invitee Members |

**X X XX XX**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH